## ಟೆನಿಸ್ ಭೂ-ಪತಿ

38ರ ಹರೆಯದ ಟೆನಿಸಿಗ ಮಹೇಶ್ ಶ್ರೀನಿವಾಸ್ ಭೂಪತಿ ವಿಶ್ವದ ಅತ್ಯಂತ ಶ್ರೇಷ್ಠ ಡಬಲ್ಸ್ ಆಟಗಾರ ಎನ್ನುವುದು ನಿಸ್ಸಂಶಯ. ಇದೀಗ ಸಾನಿಯಾ ಮಿರ್ಜಾ ಜತೆಗೂಡಿ ಈ ವರ್ಷದ ಪ್ರತಿಷ್ಠಿತ ಫ್ರೆಂಚ್ ಓಪನ್ ಮಿಕ್ಸೆಡ್ ಡಬಲ್ಸ್ ಗೆದ್ದಿರುವ ಭೂಪತಿ, ಅಪ್ಪರ ಮಟ್ಟಿಗೆ ಟೆನಿಸ್‌ನಲ್ಲಿ ಭೂ-ಪತಿಯೇ. ಈ ಜೋಡಿ 2009ರಲ್ಲಿ ಆಸ್ಟ್ರೇಲಿಯನ್ ಓಪನ್ ಮಿಕ್ಸೆಡ್ ಡಬಲ್ಸ್ ಪ್ರಶಸ್ತಿಯನ್ನೂ ಗೆದ್ದಿತ್ತು. ಈ ವರ್ಷದ ಇನ್ನುಳಿದ ಗ್ರ್ಯಾನ್‌ಸ್ಲಾಮ್‌ಗಳಲ್ಲೂ ಈ ಜೋಡಿಯ ಪಾರಮ್ಯ ಮೆರೆಯುವ ಸಂಭವವಿದೆ.

ಈ ಮಧ್ಯೆ 'ಲಂಡನ್ ಒಲಿಂಪಿಕ್ಸ್‌ನಲ್ಲಿ ಡಬಲ್ಸ್ ತಂಡದಲ್ಲಿ ಮಹೇಶ್ ಭೂಪತಿಗೆ ಜೋಡಿ ಯಾರು' ಎನ್ನುವ ಹೊಸ ವಿವಾದವೊಂದು ಭುಗಿಲೆದ್ದಿದೆ. 'ರೋಹನ್ ಬೋಪಣ್ಣ ಜತೆಗೂಡಿ ಡಬಲ್ಸ್ ಆಡುತ್ತೇನೆ' ಎನ್ನುವುದು ಭೂಪತಿಯ ನಿಲುವು. 'ಲಿಯಾಂಡರ್ ಪೇಸ್ ಜತೆಗೂಡಿ ಆಡಿ' ಎನ್ನುವುದು ಭಾರತೀಯ ಒಲಿಂಪಿಕ್ ಸಂಸ್ಥೆಯ ಆದೇಶ. 'ನನಗೂ ಪೇಸ್‌ಗೂ ಹೊಂದಾಣಿಕೆಯಿಲ್ಲ, ಆಗಲ್ಲ' ಎಂದಿದ್ದಾನೆ ಭೂಪತಿ. ಮುಂದಿನ ದಿನಗಳಲ್ಲಿ ಈ ವಿವಾದ ಯಾವ ತಿರುವು ಪಡೆಯುತ್ತದೋ ಗೊತ್ತಿಲ್ಲ.

ಈಗಾಗಲೆ 12 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವ ಭೂಪತಿ, 1997ರಲ್ಲಿ ಗ್ರ್ಯಾನ್‌ಸ್ಲಾಮ್ ಗೆದ್ದ ಮೊದಲ ಭಾರತೀಯ. ಲಿಯಾಂಡರ್ ಪೇಸ್ ಜತೆ ಸೇರಿ 99ರಲ್ಲಿ ಭೂಪತಿ ವಿಂಬಲ್ಡನ್ ಸಹಿತ ಮೂರು ಡಬಲ್ಸ್ ಪ್ರಶಸ್ತಿ ಗೆದ್ದವರು. ಈ ಜೋಡಿ ಆ ವರ್ಷದ ಜಗತ್ತಿನ ಎಲ್ಲ ನಾಲ್ಕು ಗ್ರ್ಯಾನ್ ಸ್ಲಾಮ್‌ಗಳಲ್ಲೂ ಫೈನಲ್ ತಲುಪಿ ದಾಖಲೆ ಬರೆಯಿತು. ಅದು ಆ ವರ್ಷದ 'ವಿಶ್ವದ ನಂಬರ್ ಒನ್' ಡಬಲ್ಸ್ ಜೋಡಿ! ಅದೇ ವರ್ಷ ಭೂಪತಿ ಯುಎಸ್ ಓಪನ್‌ನಲ್ಲಿ ಮಿಕ್ಸೆಡ್ ಡಬಲ್ಸ್ ಪ್ರಶಸ್ತಿಯನ್ನೂ ಗೆದ್ದುಕೊಂಡದ್ದು ವಿಶೇಷ. ಆದರೆ ಆ ಬಳಿಕ ಜೋಡಿಯ ನಡುವೆ ಭಿನ್ನಮತ ಬಂದು ಬೇರೆಯಾಯಿತು.

ಮಿಕ್ಸೆಡ್ ಡಬಲ್ಸ್‌ನಲ್ಲಿ ಭೂಪತಿ ಜತೆ ಸೇರಿದ ಬಹಳಷ್ಟು ಆಟಗಾರ್ತಿಯರು ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. 2006ರಲ್ಲಿ ಮಾರ್ಟಿನಾ ಹಿಂಗಿಸ್ ಜತೆಗೂಡಿದ ಮಹೇಶ್, ಆಸ್ಟ್ರೇಲಿಯಾ ಓಪನ್‌ನಲ್ಲಿ ಅನ್‌ಸೀಡೆಡ್ ಆಗಿದ್ದರೂ ಫೈನಲ್‌ವರೆಗೆ ತಲುಪಿ ಪ್ರಶಸ್ತಿ ಗೆದ್ದರು. 2007ರಲ್ಲಿ ಫ್ರೆಂಚ್ ಓಪನ್‌ನಲ್ಲಿ ರ್‍ಯಾಡೆಕ್ ಸ್ಟಿಪನಾಕ್ ಜತೆ ಸೇರಿ ಅಗ್ರಸೀಡ್ ಆಟಗಾರರನ್ನು ಸೋಲಿಸಿ ಕ್ವಾರ್ಟರ್ ಫೈನಲ್ ತಲುಪಿದರು. ಫ್ರೆಂಚ್ ಓಪನ್‌ನಲ್ಲೂ ಅಗ್ರ ಸೀಡ್ ಜೋಡಿಯನ್ನು ಮಣಿಸಿದರು.

38ರ ಹರೆಯದಲ್ಲೂ ಹೀಗೆ ವಿಶ್ವಮಟ್ಟದ ಟೂರ್ನಿಗಳಲ್ಲಿ ಸಾಧನೆ ಮೆರೆಯುವುದು ಅಚ್ಚರಿಯೇ. 6 ಅಡಿ 1 ಇಂಚು ಎತ್ತರದ ಈ ಕೃಷ್ಣಸುಂದರ, ಇನ್ನೂ 5-6 ವರ್ಷಗಳ ಕಾಲ ಅಗ್ರಸ್ಥಾನದಲ್ಲಿ ಮೆರೆಯುವಷ್ಟು ದೇಹಕ್ಷಮತೆ ಉಳಿಸಿಕೊಂಡಿದ್ದಾರೆ. ಇತ್ತೀಚೆಗೆ ಸಿಂಗಲ್ಸ್‌ನಲ್ಲಿ ಅಷ್ಟೇನೂ ಸಾಧನೆ ಮಾಡಲಾಗದಿದ್ದ ಸಾನಿಯಾ, ಮಹೇಶ್ ಜತೆಗೂಡಿದ್ದು ಅವರಿಗೂ ಲಾಭವಾಗಿದೆ. ಮಹೇಶ್‌ರ ಶಕ್ತಿಶಾಲಿ ಸರ್ವಿಸ್‌ಗಳು ಮತ್ತು ಸಾನಿಯಾರ ಚಾಕಚಕ್ಯತೆಯ ರಿವರ್ಸ್‌ಗಳು ಪಂದ್ಯ ಗೆಲ್ಲಿಸಿವೆ.

ಆಯ್ಕೆಯಿಂದ ಕ್ರಿಶ್ಚಿಯನ್ ಆಗಿರುವ, ತೆಲುಗು ಮಾತೃಭಾಷೆಯ ಭೂಪತಿ ಈವರೆಗೆ ಟೆನಿಸ್‌ನಲ್ಲಿ ಗೆದ್ದಿರುವ ಬಹುಮಾನದ ಮೊತ್ತ 60 ಲಕ್ಷ ಡಾಲರ್ ದಾಟಿದೆ! ಖ್ಯಾತ ಮಾಡೆಲ್ ಶ್ವೇತಾ ಜೈಶಂಕರ್‌ರನ್ನು ಮದುವೆಯಾಗಿ, ಕೆಲಕಾಲದ ಬಳಿಕ ವಿಚ್ಛೇದನ ನೀಡಿದ ಭೂಪತಿ, ಕಳೆದ ವರ್ಷ 'ಮಿಸ್ ಯೂನಿವರ್ಸ್' ಲಾರಾ ದತ್ತಾರನ್ನು ಮದುವೆಯಾದ. ಜನವರಿಯಲ್ಲಿ ಹೆಣ್ಣು ಮಗುವಿನ ಅಪ್ಪನಾಗಿ ಈತ ಅನುಭವಿಸಿದ ಸಂತಸ, ಈಗ ಪ್ರತಿಷ್ಠಿತ ಫ್ರೆಂಚ್ ಓಪನ್ ಪ್ರಶಸ್ತಿಯೊಂದಿಗೆ ಇಮ್ಮಡಿಸಿದೆ. ಭೂಪತಿ ಮತ್ತು ಲಾರಾ ಸ್ಥಾಪಿಸಿರುವ 'ಬಿಗ್ ಡ್ಯಾಡಿ ಪ್ರೊಡಕ್ಷನ್' ಈಗ ಹೊಸ ಹಿಂದಿ ಸಿನಿಮಾ ನಿರ್ಮಿಸುತ್ತಿರುವುದು ಇನ್ನೊಂದು ವಿಶೇಷ.





## ಸೋನು ಪರ್ಯಟಣೆ

ಸೋನು ನಿಗಮ್ ಕಾಲಿಗೆ ಮತ್ತೆ ಚಕ್ರ ಕಟ್ಟಿಕೊಂಡಿದ್ದಾನೆ. 14 ಜನ ಸಂಗೀತಜ್ಞರ ತಂಡದೊಂದಿಗೆ ಆಫ್ರಿಕಾದ ದೇಶಗಳಲ್ಲಿ 'ಸಂಗೀತ ಪರ್ಯಟಣೆ' ಕೈಗೊಂಡಿದ್ದಾನೆ. ಟ್ರಿನಿಡಾಡ್‌ನಲ್ಲಿ ಕಳೆದ ವಾರ ನಡೆದ ಈತನ ಸಂಗೀತ ಕಾರ್ಯಕ್ರಮಕ್ಕೆ ಸಹಸ್ರಾರು ಜನರು ಸೇರಿದ್ದರು. ಎಂಟು ಗಂಟೆಗೆ ಆರಂಭವಾದ ಈ ಸಂಗೀತ ಸಂಜೆ ಮಧ್ಯರಾತ್ರಿಯವರೆಗೂ ಮುಂದುವರೆಯಿತು. ನಿರಂತರ 4 ಗಂಟೆಗಳ ಶೋನಲ್ಲಿ ಸೋನು ಭಾರತೀಯ ಚಿತ್ರಸಂಗೀತದ ರಂಗನ್ನು ವಿಶ್ವಮಟ್ಟದಲ್ಲಿ ಪಸರಿಸಿದ್ದಾನೆ. ಈ ತಂಡ ಡೆಟ್ರಾಯ್ಟ್ ಮತ್ತಿತರ ಕಡೆಗಳಲ್ಲೂ ಸಂಗೀತ ಸಂಜೆ ನಡೆಸಲಿದೆ.

ಟ್ರಿನಿಡಾಡ್‌ನಲ್ಲಿ ಇದೇ ಮೊದಲ ಬಾರಿಗೆ ವೇದಿಕೆಯಲ್ಲಿ ತನ್ನ ಐದರ ಹರೆಯದ ಮಗನನ್ನೂ ಎತ್ತಿಕೊಂಡು ಹಾಡಿದ ಸೋನು, (ಬರ್ತ್‌ಡೇ 30-7-1973) ಕುಟುಂಬದ ಸಂಗೀತ ಪರಂಪರೆಯನ್ನು ಮೂರನೇ ತಲೆಮಾರಿಗೆ ಮುಂದುವರಿಸಿದ್ದಾನೆ. ಸೋನು ಮಗ ನೆವಾನ್ ಕೋರಸ್‌ಗೆ ದನಿಗೂಡಿಸಿದ್ದು ವಿಶೇಷ. ಸೋನು ಅಪ್ಪ ಕೂಡಾ ಹಿಂದೆ ಹೀಗೆಯೇ ಮಹಮ್ಮದ್ ರಫಿಯ ಹಾಡುಗಳನ್ನು ಹಾಡುತ್ತಿದ್ದಾಗ ಎಳೆಯ ಮಗನನ್ನು ಪಕ್ಕದಲ್ಲೇ ನಿಲ್ಲಿಸಿಕೊಂಡು ಹಾಡಲು ಕಲಿಸಿದ್ದ. ಲಂಡನ್‌ನಲ್ಲಿ ಇತ್ತೀಚೆಗೆ ಗಾಯಕ ಅತಿಫ್ ಇಸ್ಲಾಂ ಜತೆ ಸೇರಿ ಭಾರತ- ಪಾಕ್ ಶಾಂತಿ ಸೌಹಾರ್ದಕ್ಕೆ ನೆರವಾಗಲು ಸಂಗೀತ ಸಂಜೆ ನಡೆಸಿದ ಸೋನು ನಿಗಮ್, ಸದ್ಯಕ್ಕಂತೂ ಭಾರತೀಯ ಹಿನ್ನೆಲೆ ಗಾಯನದ ಸೂಪರ್‌ಸ್ಟಾರ್. ಒಂದು ಹಾಡಿಗೆ 10ರಿಂದ 12 ಲಕ್ಷ ರೂಪಾಯಿ ಪಡೆಯುವ ಸೋನು, ಕನ್ನಡ ಚಿತ್ರರಂಗದಲ್ಲೂ ಅತ್ಯಂತ ಜನಪ್ರಿಯ. ಸೋನು ಈಗಾಗಲೆ ಕನ್ನಡದಲ್ಲಿ ಹಾಡಿರುವ ಹಾಡುಗಳ ಸಂಖ್ಯೆ 100 ದಾಟಿದೆ ಎನ್ನುವುದು ಕುತೂಹಲಕರ. ಹಾಲಿವುಡ್ ಸಿನಿಮಾಗಳಿಗೆ ಹಿಂದಿ ಸಂಭಾಷಣೆಯ ಡಬ್ಬಿಂಗ್ ಕಲಾವಿದನಾಗಿಯೂ ಕೆಲಸ ಮಾಡುವ ಸೋನು, ಈಗಾಗಲೆ ಎರಡು ಬಾರಿ ವಿಶ್ವಪರ್ಯಟಣೆ ನಡೆಸಿ ಜಗತ್ತಿನ 30ಕ್ಕೂ ಹೆಚ್ಚು ದೇಶಗಳಲ್ಲಿ ಹಾಡಿದ್ದಾನೆ. ಹಿಂದಿ, ಕನ್ನಡ ಮಾತ್ರವಲ್ಲ, ತಮಿಳು, ಅಸ್ಸಾಮಿ, ಪಂಜಾಬಿ, ಬಂಗಾಳಿ, ಮರಾಠಿ ಮತ್ತು ತೆಲುಗು ಚಿತ್ರಗಳಿಗೂ ಹಾಡಿರುವ ಸೋನು ವೃತ್ತಿಬದ್ಧತೆಯ ಬಗ್ಗೆ ಎರಡು ಮಾತಿಲ್ಲ. ವೇದಿಕೆಯ ಮೇಲೆ ಸೋನು ಪ್ರದರ್ಶನ ನೋಡಿದವರು ಈತನನ್ನು ಸದ್ಯದ 'ಗ್ರೇಟೆಸ್ಟ್ ಶೋಮ್ಯಾನ್' ಎಂದೇ ಕರೆಯುತ್ತಿದ್ದಾರೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial: 25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65